ಶ್ರೀ ಹಾರನಹಳ್ಳಿ ರಾಮಸ್ವಾಮಿ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಅಧ್ಯಕ್ಷರೇ, ''ಕರ್ನಾಟಕ ನ್ಯಾಯವಾದಿಗಳ ಕಲ್ಯಾಣ ನಿಧಿ(ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು ಅನುಬಂಧ I, II ವಿಧೇಯಕವನ್ನು ಮಂಡಿಸಲಾಗಿದೆ.

2) ಕರ್ನಾಟಕ ಭೂ ಕಂದಾಯ(ತಿದ್ದುಪಡಿ) ವಿಧೇಯಕ 1993 ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎಂ. ರಾಜಶೇಖರ ಮೂರ್ತಿ(ಕಂದಾಯ ಸಚಿವರು):- ಮಾನ್ಯ ಅಧ್ಯಕ್ಷರೇ, ''1993ನೇ ಸಾಲಿನ ಕರ್ನಾಟಕ ಭೂ ಕಂದಾಯ(ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು:- ಪ್ರಸ್ತಾವ ಏನೆಂದರೆ ''ಕರ್ನಾಟಕ ಭೂ ಕಂದಾಯ(ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು''.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಎಂ. ರಾಜಶೇಖರ ಮೂರ್ತಿ(ಕಂದಾಯ ಸಚಿವರು): ಮಾನ್ಯ ಅಧ್ಯಕ್ಷರೇ, ''ಕರ್ನಾಟಕ ಭೂ ಕಂದಾಯ(ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು:- ಅನುಬಂಧ I, II ವಿಧೇಯಕವನ್ನು ಮಂಡಿಸಲಾಗಿದೆ.

1993ನೇ ಕರ್ನಾಟಕ ಧನವಿನಿಯೋಗ (ನಂಬರ್-2) ವಿಧೇಯಕದ ಮಂಡನೆಗೆ ತಾಂತ್ರಿಕ ಕಾರಣಗಳಿಂದ ವಿರೋಧ.

ಶ್ರೀ.ಎಂ.ವೀರಪ್ಪ ಮೊಯ್ಲಿ (ಮುಖ್ಯ ಮಂತ್ರಿಯವರು):- ಸನ್ಮಾನ್ಯ ಅಧ್ಯಕ್ಷರೇ, 1993ನೇ ಸಾಲಿನ ಕರ್ನಾಟಕ ಧನವಿನಿಯೋಗ ನಂಬರ್-2, ವಿಧೇಯಕವನ್ನು ಮಂಡಿಸಲು ಅನುಮತಿಯನ್ನು ಕೋರುತ್ತೇನೆ.

ಶ್ರೀ.ಹೆಚ್.ವಿಶ್ವನಾಥಯ್ಯ:- ಮಾನ್ಯ ಅಧ್ಯಕ್ಷರೇ, I am on a point of order. ಮಾನ್ಯ ಮುಖ್ಯಮಂತ್ರಿಯವರು ಸದನದಲ್ಲಿ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಏನು ಮಂಡಿಸಿದ್ದಾರೆ. ಆದಕ್ಕೆ ನಾನು ವಿರೋಧಿಸುತ್ತೇನೆ. ಕಾರಣ ಏನೆಂದರೆ, ಅವರ ಮಂಡನೆಯು ನಮ್ಮ ಸಂವಿಧಾನದ ಪ್ರಕಾರ ಇಲ್ಲ. ನಮ್ಮ ಸಂವಿಧಾನದಲ್ಲಿ 199ನೇ ಪರಿಚ್ಛೇದವನ್ನು ತಮ್ಮ ಗಮನಕ್ಕೆ ತರಬಯಸುತ್ತಾನೆ. ಆ ಒಂದು ಅರ್ಥವಿವರಣೆಯಲ್ಲಿ ಈ ಒಂದು ಅಪ್ರೋಪ್ರಿಯೇಷನ್ ಬಿಲ್ ಎಂದು ನಾವೇನು ಕರೆಯುತ್ತೇವೆ, ಧನವಿನಿಯೋಗ ವಿಧೇಯಕ ಇದು ಒಂದು ಮನಿಬಿಲ್ಲ್. ಆ ಮಾತನ್ನು ಮಾನ್ಯ ಮುಖ್ಯಮಂತ್ರಿಯವರು ಒಪ್ಪುತ್ತಾರೆ ಎಂದು ಭಾವಿಸಿದ್ದೇನೆ. ನಾನು ಅದರ ಬಗ್ಗೆ ವಾದ ಮಾಡಲು ಹೋಗುವುದಿಲ್ಲ.

" The appropriation of monies out of the consolidated Fund of the State " ಯಾವಾಗ ಇದಕ್ಕೆ ಸಂಬಂದಪಟ್ಟಿದೆ, ಆಗ ಸಂಬಂಧಪಟ್ಟ ಎಲ್ಲಾ ಬಿಲ್ಲ್‌ಗಳೂ ಸಹ ಇದು ಮನಿಬಿಲ್ ಆಗುತ್ತದೆ ಎಂಬ ಮಾತನ್ನು ಮಾನ್ಯ ಮುಖ್ಯಮಂತ್ರಿಯವರಿಗೆ ಹೇಳಬೇಕಾಗಿಲ್ಲ ಎಂದು ನಾನು ಭಾವಿಸುತ್ತೇನೆ. ಆದಾದ ನಂತರ ಇವೊತ್ತಿನ ದಿವಸ ಆಪ್ರೋಪ್ರಿಯೇಷನ್ ಬಿಲ್ ಏನಿದೆ, ನಮ್ಮ ಸಂವಿಧಾನದ 207ನೇ ಪರಿಚ್ಛೇದವನ್ನು ತಮ್ಮ ಗಮನಕ್ಕೆ ಮತ್ತು ಮಾನ್ಯ ಸದನದ ಗಮನಕ್ಕೆ ತರಬಯಸುತ್ತೇನೆ. " A bill or amendment making provision for any of the matters specified in sub-clauses (a) to (f) of clause (1) of Article 199 shall not be introduced or moved except on the recommendations of the Governor and a bill making such provision shall not be introduced". ಸನ್ಮಾನ್ಯ ಅಧ್ಯಕ್ಷರೇ, ಇವೊತ್ತಿನ ದಿವಸ ಪರಿಚ್ಛೇದ 207ರ ಪ್ರಕಾರ ಮಾನ್ಯ ರಾಜ್ಯಪಾಲರ

ಶಿಫಾರಸ್ಸು ಇಲ್ಲದಿದ್ದರೆ ಈ ಒಂದು ವಿಧೇಯಕವನ್ನು ಸದನದ ಮುಂದೆ ಮಂಡಿಸುವುದಕ್ಕೆ ಸಾಧ್ಯವಿಲ್ಲ. ಈ ವಿಚಾರವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಇವೊತ್ತಿನ ದಿವಸ 4 ಗಂಟೆಗಳಲ್ಲಿ ಎಲ್ಲಾ ಬೇಡಿಕೆಗಳು ಪಾಸ್ ಅದಮೇಲೆ....

ಅಧ್ಯಕ್ಷರು:- ನನ್ನ ಕಡೆಗೆ ಗವರ್ನರ್‌ರವರಿಂದ ಬಂದಿದೆ.

ಶ್ರೀ.ಹೆಚ್.ಏಕಾಂತಯ್ಯ :- ಅದು ಹೇಗೆ ಬರಲಿಕ್ಕೆ ಸಾಧ್ಯ ಎಂದು ಕೇಳುತ್ತಿದ್ದೇನೆ. I want to know it.

Sri M. Veerappa Moily:- I am very sorry. The Hon'ble Speaker says that the recommendation has - already come, I think, there should be a limit be for discussion. When the Speaker says that recomendation has come.

Sri Ekanthaiah:- How ?

Sri M. Veerappa Moily:- How can you question the Speaker? I am sorry we must draw a line for any discussion. When the Hon'ble Speaker says that recommendation has come and when the Governor has given, I don't think that is a question which is available for you for a discussion. There should be a limit.

ಶ್ರೀ.ಹೆಚ್.ಏಕಾಂತಯ್ಯ:- ಈಗ ತಾವು ಹೇಳುವುದಕ್ಕೂ ಒಂದು ಲಿಮಿಟ್ ಇದೆ.

Sri.M.Veerappa Moily:- When the Hon'ble Speaker says the recommendation has come and that the Governor has given, I don't think this is a question which is available for you to ask. I think there should be a limit drawn for everything. That is why the point of order cannot be allowed to be raised and there is a limit. I want ruling on this.

ಶ್ರೀ.ಹೆಚ್. ಏಕಾಂತಯ್ಯ:- ಬಂದಿಲ್ಲ ಅಥವಾ ಬಂದಿದೆ ಎಂಬುದನ್ನು ತಾವು ಆಮೇಲೆ ಹೇಳಿ, ನಾನು ತಮ್ಮ ರೂಲಿಂಗನ್ನು ಒಪ್ಪಿಕೊಳ್ಳುತ್ತೇನೆ. ಆದರೆ ನಮಗೆ ಹೇಳಲಿಕ್ಕೆ ಅಧಿಕಾರವಿಲ್ಲವೆಂದು ಮಾನ್ಯ ಮುಖ್ಯಮಂತ್ರಿಯವರು ಏನು ಹೇಳುತ್ತಿದ್ದಾರೆ ಅದು ಸರಿಯಲ್ಲ. ತಾವುಗಳು ಅಂತಿಮವಾಗಿ ಏನು ತೀರ್ಮಾನವನ್ನು ಕೊಡುತ್ತೀರಿ, ಆ ತೀರ್ಮಾನಕ್ಕೆ ನಾನು ಬದ್ಧನಾಗಿದ್ದೇನೆ. ಆದರೆ ತಾವು ಹೇಳಲು ಅವಕಾಶ ಕೊಡದೆ, ಇದರ ಬಗ್ಗೆ ಚರ್ಚೆಗೆ ಅವಕಾಶ ಬೇಡ ಎಂದು ಹೇಳುವುದಾದರೆ ಅದು ಎಷ್ಟರಮಟ್ಟಿಗೆ ಸರಿ? ಇವೊತ್ತಿನ ದಿವಸ ಈ ಒಂದು ಪೂರಕ ಅಂದಾಜನ್ನಾಗಲೀ, ಬೇಡಿಕೆಗಳ ಮೇಲಿನ ಅಂದಾಜುಗಳನ್ನಾಗಲೀ, ತಮಗೆ ಮತ್ತು ನಮಗೆಲ್ಲರಿಗೂ ಗೊತ್ತಿರುವ ಹಾಗೆ ಈ ದಿವಸ ನಾಲ್ಕು ಗಂಟೆಗೆ ಮತ್ತು ಐದೂವರೆ ಗಂಟೆಗೆ ನಾವು ಇದನ್ನು ಪಾಸ್ ಮಾಡಿದ್ದೇವೆ. ಹೀಗೆ ಪಾಸ್ ಮಾಡಿದ ಮೇಲೆ this will be communicated to the Governor. Governor's recommendation should be obtained later on and not earlier to that. ನಾನು ಹೇಳುವುದನ್ನು ಹೇಳುತ್ತೇನೆ. ತಾವು ತಮ್ಮ ತೀರ್ಮಾನವನ್ನು ನಂತರ ಕೊಡಿ. ನಾನು ತಮ್ಮ ಗಮನಕ್ಕೆ ತರುವುದೇನೆಂದರೆ, ಇವೊತ್ತಿನ ದಿವಸ ನನ್ನ ತಿಳುವಳಿಕೆಯ ಪ್ರಕಾರ ಮಾನ್ಯ ರಾಜ್ಯಪಾಲರು ಈ ರಾಜ್ಯದಲ್ಲಿ ಇಲ್ಲ.

Sri Harnahally Ramaswamy :- (Minister for Law and parlimentary affairs) Point of order. When the Speaker says that the Governor has approved, what is the meaning of going on with the argument?

(INTERUPTIONS)

Sri Haranahalli Ramaswamy:- This is nothing but obstruction tactics. This should not be allowed.

ಶ್ರೀ.ಹೆಚ್.ವಿಶ್ವನಾಥಯ್ಯ :- ಈ ಮಾತನ್ನು ಮಾನ್ಯ ಹಿರಿಯ ಮಂತ್ರಿಗಳಾಗಲೀ, ಮುಖ್ಯ ಮಂತ್ರಿಗಳಾಗಲೀ, ಹೇಳಬೇಕಾಗಿಲ್ಲ. ಇದರಿಂದ ನಮಗೆ ತೃಪ್ತಿ ಇಲ್ಲ. ಇವೊತ್ತಿನ ದಿವಸ ನಾನು ತಮ್ಮ ಗಮನಕ್ಕೆ ತರುವುದೇನೆಂದರೆ....

(ಗೊಂದಲ)

Sri.M.Veerappa Moily: How can a member beat a dead horse when there is no issue?

(INTERRUPTIONS)

Sri R.V.Deshpande:- The member does not want to question the right or the authority of the Hon'ble Speaker. Therefore there is nothing worng in allowing a member to speak on his point of order.

(INTERRUPTIONS)

Sri M.Veerappa Moily:- I think this House cannot run with this kind of a mis-trust.

ಶ್ರೀ.ಹೆಚ್.ವಿಶ್ವನಾಥಯ್ಯ :- ತಾವುಗಳು ಯಾಕೆ ಹೀಗೆ ಹೇಳುತ್ತೀರಿ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಅಂತಿಮವಾಗಿ ತಾವುಗಳು ಏನಾದರೂ ರೂಲಿಂಗ್ ಕೊಡಿ, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆರ್ಟಿಕಲ್ 207 ಪ್ರಕಾರ, ಆರ್ಟಿಕಲ್ 109 ಪ್ರಕಾರ, ಇವೊತ್ತಿನ ದಿವಸ ಆರ್ಟಿಕಲ್ 204ರ ಪಕಾರ ತಾವು ಇಲ್ಲಿ ಏನು ಬಿಲ್ಲನ್ನು ಇಡಬೇಕಾಗಿತ್ತು. ಆ ಒಂದು ರೆಕಮಂಡೇಷನ್‌ನನ್ನು ತೆಗೆದುಕೊಳ್ಳದೇ ಮಾಡಲಿಕ್ಕೆ ಸಾಧ್ಯವಿಲ್ಲ. " As soon as may be after the grant under Article 203 have been made by the Assembly..." It cannot be earlier than that.

ಇವೊತ್ತಿನ ದಿವಸ ಅಸೆಂಬ್ಲಿಯಲ್ಲಿ ನಾವು ಪಾಸ್ ಮಾಡಿರುವುದು ನಾಲ್ಕೂವರೆ ಗಂಟೆಯ ಮೇಲೆ. ಮತ್ತು ಇವೊತ್ತಿನ ದಿವಸ ಟೈಮ್ ಇದೆ. ಈ ದಿವಸ ಟೈಮ್ ಇದ್ದಾಗ ಮತ್ತು ರೆಕಮಂಡೇಷನ್ ಗವರ್ನರ್‌ರವರಿಂದ ಬಂದಿದೆ ಎಂದು ಹೇಳುವುದಾದರೆ, ನನಗೆ ಗೊತ್ತಿದೆ, ಪರ್ಟಿಕ್ಯುಲರ್ ಆಗಿ ನಾನು ಹೇಳುತ್ತಿದ್ದೇನೆ, ಈವೊತ್ತಿನ ದಿವಸ ಮಾನ್ಯ ಗವರ್ನರ್‌ರವರು ಊರಿನಲ್ಲಿ ಇಲ್ಲ. ಹಾಗೆ ಅವರು ಊರಿನಲ್ಲಿ ಇಲ್ಲದೇ ಇರತಕ್ಕಂಥ ಸಂದರ್ಭದಲ್ಲಿ ಯಾವ ರೀತಿಯಾಗಿ ಅವರಿಂದ ಈ ಶಿಫಾರಸ್ಸನ್ನು ಪಡೆಯಲು ಸಾಧ್ಯವಾಯಿತು ಎಂಬ ವಿಚಾರವನ್ನು ನಾವು ತಿಳಿದುಕೊಳ್ಳಲು ಬಯಸುವುದು ತಪ್ಪೇ? ಸಂವಿಧಾನಕ್ಕೆ ವಿರೋಧವಾಗಿ...

(ಗೊಂದಲ)

Sri M.Veerappa Moily:- I am sorry, Sir, This cannot go on record. This has to be expunged.

ಶ್ರೀ.ಹೆಚ್.ವಿಶ್ವನಾಥಯ್ಯ :- ಇದು ಸಂವಿಧಾನಕ್ಕೆ ವಿರೋಧವಾಗಿರುವುದರಿಂದ ತಾವು ಇದರ ಮಂಡನೆಗೆ ಅವಕಾಶವನ್ನು ಕೊಡಬಾರದು. ನಿಜವಾಗಿಯೂ ಅವರು ಗವರ್ನರ್‌ರವರ ಶಿಫಾರಸ್ಸು ಪಡೆದಿದ್ದೇವೆ ಎಂದು

ಹೇಳಿದರೆ ಅದನ್ನು ಪಡೆಯಲು ಸಾಧ್ಯವಿಲ್ಲದಂಥ ಪರಿಸ್ಥಿತಿಯು ಈ ಒಂದು ಕಾರಣದಿಂದ ಇದೆ. ಅದಕ್ಕೋಸ್ಕರವಾಗಿ ತಾವು ಇದನ್ನು ಪರಿಶೀಲನೆ ಮಾಡಿ ರೂಲಿಂಗ್‌ನ್ನು ಕೊಡಬೇಕೆಂದು ತಮ್ಮಲ್ಲಿ ನಾನು ಕೇಳಿಕೊಳ್ಳುತ್ತಿದ್ದೇನೆ.

Sri Harnahally Ramaswamy:- The Opposition Leaders have not able to control him.

ಶ್ರೀ ಹೆಚ್.ಏಕಾಂತಯ್ಯ:- ನಾಲ್ಕೂವರೆ, ಐದುಗಂಟೆಗೆ ಇಲ್ಲಿ ಪಾಸ್ ಮಾಡಿ ನಂತರ ಇದಕ್ಕೆ ಗವರ್ನರ್‌ರವರ ಶಿಫಾರಸ್ಸನ್ನು ತಂದಿದ್ದೇವೆ ಎಂದು ಹೇಳಿದರೆ ನಾವು ಇದನ್ನು ಒಪ್ಪಿಕೊಳ್ಳಬೇಕೆ? ತಪ್ಪಾಗಿದ್ದರೆ ತಪ್ಪು ಎಂದು ಹೇಳುವುದನ್ನು ಬಿಟ್ಟು ನಾವು ಮಾಡಿದ್ದೇ ಸರಿ ಎಂದು ಹೇಳಿದರೆ ಹೇಗೆ?

ಅಧ್ಯಕ್ಷರು:- ಈಗ ನನ್ನ ಕೈಯಲ್ಲಿ ಗವರ್ನರ್‌ರವರ ಸಹಿ ಆಗಿರುವ ಕಾಗದ ಬಂದಿದೆ. ಆದಕ್ಕೆ ತಾವು ಏನು ಪಾಯಿಂಟ್ ಆಫ್ ಆರ್ಡರ್....

ಶ್ರೀ.ಹೆಚ್.ಏಕಾಂತಯ್ಯ:- ಇವೊತ್ತಿನ ದಿವಸ ಈ ಒಂದು ಪರಿಸ್ಥಿತಿಯಲ್ಲಿ, ಮಾನ್ಯ ಗವರ್ನರ್‌ರವರು ಊರಿನಲ್ಲಿ ಇಲ್ಲದಿರತಕ್ಕಂಥ ಪರಿಸ್ಥಿತಿಯಲ್ಲಿ ಇವೊತ್ತಿನ ದಿವಸ ಅವರು ಇಂಥ ಒಂದು ಶಿಫಾರಸ್ಸನ್ನು ಪಡೆಯುವುದಕ್ಕೆ ಸಾಧ್ಯವಿಲ್ಲ, ಇದರ ಬಗ್ಗೆ ತಾವು ವಿಚಾರ ಮಾಡಬೇಕೆಂಬ ಮಾತನ್ನು ಮಾತ್ರ ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಶ್ರೀ.ಎಂ.ವೀರಪ್ಪ ಮೊಯ್ಲಿ:- ಸನ್ಮಾನ್ಯ ಅಧ್ಯಕ್ಷರೇ, ಈ ವಿಧೇಯಕವನ್ನು ಮಂಡಿಸುತ್ತಾ ಇದ್ದೇನೆ.

ಶ್ರೀ.ಹೆಚ್.ಏಕಾಂತಯ್ಯ:- ಮಾನ್ಯ ಅಧ್ಯಕ್ಷರೇ, ನನ್ನ ವಿಧಿಬಿಂದು ಏನಾಯಿತು ಎಂಬುದನ್ನು ದಯಮಾಡಿ ತಿಳಿಸ ಬೇಕು. Is it disallowed?

Mr.Speaker:-It is disallowed. ನನ್ನ ಹತ್ತಿರ ಗವರ್ನರ್‌ರವರ ಸಹಿ ಆಗಿರುವ ಕಾಗದ ಬಂದಿದೆ. ಹಾಗಾಗಿ ತಾವುಗಳು ಮಾಡಿದ ಪ್ರಸ್ತಾವನೆ ಸರಿಯಿಲ್ಲ.

ಶ್ರೀ.ಹೆಚ್.ಏಕಾಂತಯ್ಯ:- ಆಯಿತು, ನೋಡೋಣ...

ಕರ್ನಾಟಕ ಧನ ವಿನಿಯೋಗ ವಿಧೇಯಕ (ನಂ.2) 1993

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯ ಮಂತ್ರಿಗಳು):- ಮಾನ್ಯ ಅಧ್ಯಕ್ಷರೇ, 1993ನೇ ಇಸವಿಯ ಕರ್ನಾಟಕ ಧನ ವಿನಿಯೋಗ ವಿಧೇಯಕ (ನಂ.2) ವನ್ನು ಸಭೆಯ ಮುಂದೆ ಮಂಡಿಸಲು ಅನುಮತಿಯನ್ನು ಕೋರುತ್ತೇನೆ.

ಅಧ್ಯಕ್ಷರು:- ಪ್ರಸ್ತಾವ ಏನೆಂದರೆ ''1993ನೇ ಇಸವಿಯ ಕರ್ನಾಟಕ ಧನ ವಿನಿಯೋಗ ವಿಧೇಯಕ (ನಂ.2)ವನ್ನು ಮಂಡಿಸಲು ಅನುಮತಿ ನೀಡುವುದು''.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಎಂ. ವೀರಪ್ಪ ಮೊಯ್ಲಿ(ಮುಖ್ಯಮಂತ್ರಿಗಳು):- ಮಾನ್ಯ ಅಧ್ಯಕ್ಷರೇ, ''1993ನೇ ಇಸವಿಯ ಕರ್ನಾಟಕ ಧನ ವಿನಿಯೋಗ ವಿಧೇಯಕ (ನಂ.2) 1993 ವನ್ನು ಸಭೆಯ ಮುಂದೆ ಮಂಡಿಸುತ್ತೇನೆ.